## ನವ್ಯಚಿತ್ರ



ಕೇಶವ ಸ್ನೇಹಿತ ನಾಣಿಗೆ ನವ್ಯ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿದ್ದಕ್ಕೆ ಅಭಿನಂದನೆ ಹೇಳುತ್ತಾ, 'ಅಲ್ಲ ನಾಣಿ ನಿನಗೆ ಪ್ರಥಮ ಬಹುಮಾನ ಬಂದಿರುವುದೇನೋ ಸರಿ. ಆದರೆ ಆ ಚಿತ್ರ ಮಾತ್ರ ನನಗೇನೂ ಸ್ವಲ್ಪವೂ ಅರ್ಥವಾಗಲಿಲ್ಲ. ಆ ಚಿತ್ರದ ನಿಗೂಢತೆಯಾದರೂ ಏನು?' ಎಂದ.

ಅದಕ್ಕೆ ನಾಣಿ 'ಆ ಚಿತ್ರ ನನಗೆ ಅರ್ಥವಾಗಿದ್ದರೆ ತಾನೇ ನಿನಗೆ ಹೇಳೋದು. ಅದನ್ನೇನೂ ನಾನು ಬರೆದಿರಲಿಲ್ಲ. ನನ್ನ ಪುಟ್ಟ ಮಗಳು ನಾನು ಇಟ್ಟಿದ್ದ ಬಿಳಿ ಹಾಳೆಯ ಮೇಲೆ ಇಂಕು ಚೆಲ್ಲಿ ಬಿಟ್ಟಿದ್ದಳು. ನಾನು ಮರೆತು, ಬರೆದಿದ್ದ ಚಿತ್ರದೊಂದಿಗೆ ಅದನ್ನು ಕಳಿಸಿಬಿಟ್ಟಿದ್ದೆ ಅಷ್ಟೇ' ಎಂದಾಗ ಕೇಶವನಿಗೆ ಸುಸ್ತೋ ಸುಸ್ತು!

**ಶಂಕರೇಗೌಡ ತುಂಬಕೆರೆ**

---



## ಸೋಲೋ ಕಾಂಪಿಟೇಷನ್

ಅವತ್ತು ಕಿಟ್ಟಿ ಶಾಲೆಯ ವಾರ್ಷಿಕ ಕಾರ್ಯಕ್ರಮಗಳ ವಿಧ ರೀತಿಯ ಸ್ಪರ್ಧೆಗಳಿಗೆಂದು ಹೊರಡುತ್ತಿದ್ದ. ಅಮ್ಮ–ಅಪ್ಪನಿಗೆ ನಮಸ್ಕರಿಸಿ, ಅಜ್ಜಿಗೂ ನಮಸ್ಕಾರ ಮಾಡಿದಾಗ ಅಜ್ಜಿ ಕೇಳಿದ್ರು. 'ಏನೇನು ಕಾಂಪಿಟೇಷನ್ ಇದೆ ಕಿಟ್ಟಿ? ನೀನು ಆಗಲೇ ಕೆಲವು ಸ್ಪರ್ಧೆಗಳಲ್ಲಿ ಗೆದ್ದಿದ್ದೀಯಾ ಅಲ್ವಾ' ಅಂದ್ರು..

'ಇಲ್ಲಜ್ಜಿ, ಅದು ಗ್ರೂಪ್ ಕಾಂಪಿಟೇಷನ್, ಇದು ಸೋಲೋ ಸ್ಪರ್ಧೆ. ಅಂದಾಗ ಅಜ್ಜಿ ಅಂದ್ರು.. ಏ... ಅದೆಂಥದೋ..ಸ್ಪರ್ಧೆ ಇಡೋದೇ ಗೆಲ್ಲೋಕೆ ಅಂತ, ಸೋಲೋಕೆ ಯಾಕೋ ಸ್ಪರ್ಧೆ ಇಡಬೇಕು ಅಂದಾಗ, ಅಪ್ಪ, ಅಮ್ಮ, ಕಿಟ್ಟಿ ಎಲ್ಲರೂ ನಗೆಗಡಲಿನಲ್ಲಿ ಮುಳುಗಿದರು. ಆ ನಂತರ ಕಿಟ್ಟಿ ಸೋಲೋ ಅರ್ಥವನ್ನು ಬಿಡಿಸಿ ಹೇಳಿದ, ಅಜ್ಜಿ ಸೋಲೋ ಅಂದ್ರೆ ಒಬ್ಬರೇ ಸ್ಪರ್ಧೆಯಲ್ಲಿ ಭಾಗವಹಿಸುವುದು ಅಂತ.. ಸೋಲೋದು ಅಂತಲ್ಲ ಅಂದಾಗ ಅಜ್ಜಿನೂ ಮನಸಾರೆ ನಕ್ಕರು.

ಕಲೆ: ಗಣೇಶ ಆಚಾರ್ಯ

**ಸುಮನಾ**